# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ. 506/2018

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : ಸಿದ್ದೇಶ್ ಗೌಡ | **ಚಾಸಾಃ 2** | **ಫ್ರಾಸಾಃ 2** |
| **ತಂದೆಯ ಹೆಸರು** | : ಹನುಮಂತಪ್ಪ | | |
| **ವಯಸ್ಸು** | : 39 ವರ್ಷ | | |
| **ವೃತ್ತಿ** | : ವ್ಯವಸಾಯ | | |
| **ವಾಸಸ್ಥಳ** | : ಹಾಳೆಬಾತಿ ಗ್ರಾಮ | | |

ದಿನಾಂಕಃ **21-09-2023** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಶವ ತನಿಖಾ ವರದಿಯಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ನಿಪಿ-2 ಸಾಕ್ಷಿಯ ಸಹಿಯನ್ನು ನಿಪಿ-**2 (ಎ)** ಎಂದು ಗುರುತಿಸಲಾಯಿತು. ನಿಪಿ-2 ದಾಖಲೆಗೆ 2017 ನೇ ಸಾಲಿನಲ್ಲಿ ದಾವಣಗೆರೆಯ ಚಿಗಟೇರಿ ಆಸ್ಪತ್ರೆಯಲ್ಲಿ ಸಹಿಯನ್ನು ಮಾಡಿರುತ್ತೇನೆ . ಆ ಸಮಯದಲ್ಲಿ ಚಾಸಾ-3, 4 ಮತ್ತು ಮೃತನ ಸಂಬಂಧಿಕರು ಹಾಜರಿದ್ದರು. ನಿಪಿ-2 ದಾಖಲೆಯನ್ನು ಪೊಲೀಸರು ನಮಗೆ ಓದಿ ತಿಳಿಸಿರುತ್ತಾರೆ. ನಿಪಿ-2 ದಾಖಲೆಯು ಮೃತ ಸಿದ್ದಲಿಂಗಯ್ಯರವರು ಅಪಘಾತದಲ್ಲಿ ಮೃತ ಪಟ್ಟ ಬಗ್ಗೆ ಸಂಬಂಧಪಟ್ಟಿದ್ದು. ಮೃತನ ದೇಹದ ಭಾಗಗಳಲ್ಲಿ ಗಾಯಗಳಾಗಿರುತ್ತದೆ. ನಿಪಿ-2 ದಾಖಲೆಯನ್ನು ಪೊಲೀಸರು ಮಧ್ಯಾಹ್ನ 1.00 ರಿಂದ 3.00 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಒಂದು ಭಾವಚಿತ್ರದಲ್ಲಿ ತಾನು ಇರುವ ಬಗ್ಗೆ ನೋಡಿ ನೋಡಿ ಗುರುತಿಸಿದ್ದು, ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ಮೃತ ಸಿದ್ದಲಿಂಗಯ್ಯರವರ ಶವ ತನಿಖೆಯನ್ನು ಮಾಡುವ ಸಮಯದಲ್ಲಿ ಹಾಜರಾಗುವಂತೆ ಪೊಲೀಸರು ನನಗೆ ಯಾವುದೇ ತಿಳುವಳಿಕೆ ಪತ್ರವನ್ನು ಕೊಟ್ಟಿರುವುದಿಲ್ಲ ನಿಪಿ-2 ದಾಖಲೆಗೆ ಸಹಿಯನ್ನು ಮಾಡುವ ಪೂರ್ವದಲ್ಲಿ ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-2 ದಾಖಲೆಯಲ್ಲಿ

ಏನು ಬರೆದಿದೆ ಎಂಬ ವಿಚಾರ ನನಗೆ ಈಗ ಗೊತ್ತಿಲ್ಲ. ಮೃತ ಸಿದ್ದಲಿಂಗಯ್ಯನವರಿಗೆ ಅಪಘಾತವಾಗಿರುವ ವಿಚಾರ ತಿಳಿದಿರುತ್ತದೆ ಆದರೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನಿಪಿ-2 ದಾಖಲೆಯನ್ನು ಪೊಲೀಸಿನವರು ಬರೆದಿರುತ್ತಾರೆ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**